ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ

೧೭೬೧. ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಯೋಚಿಸಿ ಸಮಿತಿಯನ್ನು ರಚಿಸಿದೆಯೇ ಹಾಗೂ ಇದರ ಮುಖ್ಯಸ್ಥರಾರು?

ಆ) ರಾಜ್ಯದ ಸಮಗ್ರ ದೃಷ್ಟಿಕೋನಕ್ಕನುಗುಣವಾಗಿ ಸಮಿತಿಯನ್ನು ರಚಿಸಲಾಗಿದೆಯೇ ಹಾಗಿದ್ದಲ್ಲಿ ಸಮಿತಿಯ ಅಧ್ಯಕ್ಷರ ಮತ್ತು ಸದಸ್ಯರನ್ನು ಹೆಸರಿಸಿ?

ಇ) ಇದನ್ನು ಸ್ಥಾಪಿಸಲಾಗುವುದೆ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದೆ.

ಆ) ಹೌದು.

ಅಧ್ಯಕ್ಷರು.

೧) ಶ್ರೀ ಪ್ರೊ. ಡಿ.ಕೆ. ಸತ್ಯನಾರಾಯಣಶೆಟ್ಟಿ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ.

ಸದಸ್ಯರು

೨) ಶ್ರೀ ಡಾ. ಎಸ್. ರಾಮೇಗೌಡ, ಪ್ರಾಂಶುಪಾಲರು, ಪಾಂಡಿಚೆರಿ ತಾಂತ್ರಿಕ ಮಹಾವಿದ್ಯಾಲಯ, ಪಾಂಡಿಚೆರಿ.

೩) ಶ್ರೀ ಪ್ರೊ. ಎಂ. ಎಂ. ಧನಂಜಯ, ಪ್ರಾಂಶುಪಾಲರು, ಎಸ್.ಜೆ.ಸಿ.ಇ. ಮೈಸೂರು.

೪) ಪ್ರೊ. ಗೋವಿಂದರಾವ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬೆಂಗಳೂರು.

೫) ಶ್ರೀ ಡಾ. ಎಲ್. ಎಸ್. ಚಂದ್ರಕಾಂತ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು.

ಇ) ಸಮಿತಿ ವರದಿ ಸಲ್ಲಿಸಿದ್ದು, ವರದಿಯನ್ನು ಪರಿಶೀಲಿಸಲಾಗುತ್ತಿದೆ.

ಬೀಳಗಿ ಮತ್ತು ಜಮಖಂಡಿ ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಯೋಜನೆ

೧೧೪೦. ಶ್ರೀ ಬಾಬುರೆಡ್ಡಿ ವಿ. ತಂಗಳ್(ಬೀಳಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಹಾಗೂ ಮಕ್ಕಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಹಾಗೂ ಬೀಳಗಿ ಕ್ಷೇತ್ರದಲ್ಲಿ ಕುಡಿಯುವ ನೀರಿನ ಕಾರ್ಯಕ್ರಮ ಹಮ್ಮಿಕೊಂಡಿರುವ ಹಳ್ಳಿಗಳ ಸಂಖ್ಯೆ ಎಷ್ಟು?

ಆ) ಉಳಿದ ಹಳ್ಳಿಗಳಿಗೆ ಸೌಲಭ್ಯ ಕಲ್ಪಿಸಿಕೊಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ರಾಷ್ಟ್ರೀಯ ಗ್ರಾಮಾಂತರದ ನೀರು ಪೂರೈಕೆ ಯೋಜನೆಯ ಮೇರೆಗೆ ಮೇಲ್ಕಂಡ ಎರಡೂ ತಾಲ್ಲೂಕುಗಳಲ್ಲಿ ಮಂಜೂರಾದ ಯೋಜನೆಗಳ ಸಂಖ್ಯೆ ಎಷ್ಟು? ಹಾಗೂ

ಈ) ಇವುಗಳು ಹಾಗಿದ್ದರೆ ಕಾರ್ಯಾರಂಭ ಮಾಡುವುದು ಯಾವಾಗ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಮಾನ್ಯ ಸಚಿವರು).—

ಅ)

ವಿಧಾನಸಭಾ ಕ್ಷೇತ್ರ	ಹಳ್ಳಿಗಳ ಸಂಖ್ಯೆ
ಜಮಖಂಡಿ	೩೫
ಬೀಳಗಿ	೯೦
ಒಟ್ಟು	೧೨೬

ಆ) ಸೌಲಭ್ಯ ಕಲ್ಪಿಸಿಕೊಡಲಾಗದಿರುವ ಹಳ್ಳಿಗಳು ಕೇವಲ ೩ ಇದ್ದು, ಇವು ಬೀಳಗಿ ಕ್ಷೇತ್ರದಲ್ಲಿವೆ. ಈ ಹಳ್ಳಿಗಳಲ್ಲಿ ಅವಲಂಭಿಸ ಬಹುದಾದ ಜಲಮೂಲಗಳನ್ನು ಸ್ಥಿರಪಡಿಸುವ ಪ್ರಯತ್ನ ನಡೆದಿದ್ದು ಜಲಮೂಲ ಸ್ಥಿರವಾದ ಕೂಡಲೆ ಸೌಲಭ್ಯ ಕಲ್ಪಿಸಲಾಗುವುದು.

ಇ)

ತಾಲ್ಲೂಕು	ಯೋಜನೆ	ಮಂಜೂರಾದ ಹಳ್ಳಿಗಳ ಸಂಖ್ಯೆ
ಬೀಳಗಿ	ಎನ್‌ಆರ್‌ಡಬ್ಲ್ಯೂಎಸ್	೧೩
	ಎಆರ್‌ಡಬ್ಲ್ಯೂಎಸ್	೧
	ಒಟ್ಟು	೧೪
ಜಮಖಂಡಿ	ಎನ್‌ಆರ್‌ಡಬ್ಲ್ಯೂಎಸ್	೧೧
	ಎಆರ್‌ಡಬ್ಲ್ಯೂಎಸ್	೪
	ಒಟ್ಟು	೧೫

ಈ) ಯೋಜನೆಗಳು ಮಂಜೂರಾಗಿರುವ ಒಟ್ಟು ೩೩ ಹಳ್ಳಿಗಳ ಪೈಕಿ ೨೨ ಹಳ್ಳಿಗಳಲ್ಲಿ ಯೋಜನೆ ಪೂರ್ಣಗೊಂಡು ನೀರು ಸರಬರಾಜಾಗುತ್ತಿದೆ. ೫ ಹಳ್ಳಿಗಳಲ್ಲಿ ಯೋಜನೆಗಳು ನೇರ ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ ಆರು ಹಳ್ಳಿಗಳಲ್ಲಿ ಯೋಜನೆಗಳ ಕೆಲಸ ಪ್ರಗತಿಯಲ್ಲಿದ್ದು ವಿವಿಧ ಹಂತದಲ್ಲಿವೆ. ಈ ಪೈಕಿ ೨ ಯೋಜನೆಗಳು ಮಾರ್ಚ್ ೮೬ರ ಒಳಗೆ, ೩ ಯೋಜನೆಗಳನ್ನು ಮಾರ್ಚ್ ೮೭ರ ಒಳಗೆ ಮತ್ತು ಒಂದು ವೈದ್ಧಿಕರಣ ಯೋಜನೆಯನ್ನು ೧೯೮೮ರಲ್ಲಿ ಪೂರ್ತಿಗೊಳಿಸುವ ಗುರಿ ಇದೆ.

ಗ್ರಾಮಾಂತರ ಪಶುವೈದ್ಯಶಾಲೆಗಳನ್ನು ತೆರೆಯುವ ಬಗ್ಗೆ

೧೫೩೩. ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ).—ಮಾನ್ಯ ಪಶುಸಂಗೋಪನೆ ಹಾಗೂ ಪಶುವೈದ್ಯ ಸೇವೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪಶುವೈದ್ಯ ಶಾಲೆಗಳನ್ನು ತೆರೆಯಲು ಜಾನುವಾರು ಸಂಖ್ಯೆಗನುಗುಣವಾಗಿ ತೆರೆಯಲಾಗುವುದೇ ಅಥವಾ ಪಶುವೈದ್ಯಶಾಲೆಗಳಿಗೆ ಇರುವ ದೂರವನ್ನು ಅನುಸರಿಸಿ ಮಂಜೂರಾತಿ ನೀಡಲಾಗುವುದೇ?

ಆ) ಹಾಲಿ ಇರುವ ವೈದ್ಯಶಾಲೆಗಳಲ್ಲಿ ಪಶುಪಾಲನಾ ಇನ್ಸ್‌ಪೆಕ್ಟರ್ ಹುದ್ದೆಗಳು ಖಾಲಿ ಇದ್ದು ಸುಮಾರು ವರ್ಷಗಳಾಗಿ ಇರುವುದರಿಂದ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೇ?

ಇ) ಚಳ್ಳಕೆರೆ ಪಶುವೈದ್ಯ ಶಾಲೆಯ ಕಟ್ಟಡ ಕಟ್ಟಿದ ಬಗಾಯಿತ್ತು ದುರಸ್ತಿಗೊಳ್ಳದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಇದನ್ನು ದುರಸ್ತಿಗೊಳಿಸಲಾಗುವುದೇ?